# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** 847

**ಸದಸ್ಯರ ಹೆಸರು** : ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)

**ಉತ್ತರಿಸುವ ದಿನಾಂಕ** : 13.07.2023

**ಉತ್ತರಿಸುವ ಸಚಿವರು** : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಗ್ಯಾಜೇಟಿಯರ್ ಇಲಾಖೆಯಿಂದ ಕೊನೆಯ ಬಾರಿ "ಕರ್ನಾಟಕ ಕೈಪಿಡಿ" ಕನ್ನಡ ಆವೃತ್ತಿ ಪುಸ್ತಕವನ್ನು ಪ್ರಕಟಿಸಿರುವುದು ಯಾವಾಗ; ಹೊಸ ಪುಸ್ತಕಗಳು ಎರಡೂ ಭಾಷೆಗಳಲ್ಲಿ ಪ್ರಕಟಗೊಳ್ಳದಿರಲು ಕಾರಣವೇನು; | ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯಿಂದ "ಕರ್ನಾಟಕ ಕೈಪಿಡಿ" ಭಾಗ-1 ಮತ್ತು ಭಾಗ-2ರ ಕನ್ನಡ ಆವೃತ್ತಿಯ ಪುನರ್ ಮುದ್ರಣ ಪುಸ್ತಕವನ್ನು 2018ರಲ್ಲಿ ಹಾಗೂ ಸದರಿ ಪುಸ್ತಕದ ಆಂಗ್ಲ ಆವೃತ್ತಿ "A Hand book of Karnataka" ಅನ್ನು 2020ರಲ್ಲಿ ಪ್ರಕಟಿಸಲಾಗಿದೆ.<br>ಸದರಿ ಪುಸ್ತಕವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಇಲಾಖೆಯ ವತಿಯಿಂದ ಪ್ರಕಟಿಸಲಾಗುತ್ತಿದೆ. |
| ಆ) | ಕರ್ನಾಟಕ ಕೈಪಿಡಿ ಪುಸ್ತಕವನ್ನು ಪ್ರತಿ ವರ್ಷ ಪ್ರಕಟಿಸಲಾಗುತ್ತದೆಯೇ; (ವಿವರ ನೀಡುವುದು) | ಕರ್ನಾಟಕ ಕೈಪಿಡಿ (ಕನ್ನಡ ಆವೃತ್ತಿ) ಹಾಗೂ A Hand book of Karnataka (ಆಂಗ್ಲ ಆವೃತ್ತಿ) ಪುಸ್ತಕವನ್ನು ಕ್ರಿಯಾ ಯೋಜನೆಗೆ ಅನುಗುಣವಾಗಿ ಪ್ರಕಟಿಸಲು ಕ್ರಮವಹಿಸಲಾಗುತ್ತಿದ್ದು, ಪುನರಾವರ್ತಿತವಾಗಿ ಐದು ವರ್ಷಕ್ಕೊಮ್ಮೆ ಪ್ರಕಟಿಸಲಾಗುತ್ತಿದೆ. |
| ಇ) | ಪ್ರಸ್ತುತ ಕರ್ನಾಟಕ ಕೈಪಿಡಿ ಪುಸ್ತಕವು ಪ್ರಕಟವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ, ಹೊಸ ಆವೃತ್ತಿಯ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಪುಸ್ತಕವನ್ನು ಯಾವ ಕಾಲಮಿತಿಯಲ್ಲಿ ಪ್ರಕಟಿಸಲಾಗುವುದು; | 2022-23ನೇ ಕ್ರಿಯಾ ಯೋಜನೆಯಲ್ಲಿ ಕನ್ನಡ ಆವೃತ್ತಿಯನ್ನು ಪ್ರಕಟಿಸಲು ಉದ್ದೇಶಿಸಲಾಗಿರುತ್ತದೆ. |
| ಈ) | ಕರ್ನಾಟಕ ಗ್ಯಾಜೇಟಿಯರ್ ಇಲಾಖೆಯಿಂದ ಪ್ರಕಟಿಸಲಾಗುವ ವಿವಿಧ ಪುಸ್ತಕಗಳು ಯಾವುವು? | ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ವತಿಯಿಂದ ಜಿಲ್ಲಾ/ ತಾಲ್ಲೂಕು ಗ್ಯಾಸೆಟಿಯರ್ ಗಳನ್ನು ಮತ್ತು ವಿಶೇಷ ಪ್ರಕಟಣೆಯ ಪುಸ್ತಕಗಳನ್ನು ಹಾಗೂ ಸರ್ಕಾರ ರೂಪಿಸುವ ವಿಶೇಷ ಯೋಜನೆಯಡಿ ಆದೇಶಿಸುವ ಗ್ಯಾಸೆಟಿಯರ್ ಗಳನ್ನು ಪ್ರಕಟಿಸಲಾಗುವುದು. |

ಕಸಂವಾ 04 ಕರಾಗೆ ಆಕ 2023

( ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು